ಪ್ರಕರಣ ಪ್ರಕಾರ ದಿವಾಳೀಯಾದವರೆಂಬದಾಗಿ ಅಪ್ಪಣೇ ಆಗಬೇಕೆಂದು ಕೋರಿಕೊಂಡಿರುವದರಿಂದ, ಸ್ವ 1884ನೇ ಜನವರೀ 30ನೇ ದಿವಿ 11ಘಂಟೆಗೆ ಸದರೀ ಅರ್ಜೀ ವಿಷಯದಲ್ಲಿ ದರಿಯಾಫ್ತ್ ಮಾಡುವದರಿಂದ ಆ ಕಾಲದಲ್ಲಿ ಅರ್ಜೀದಾರ್ರು ಕೋರ್ಟು ರೂಬರೂ ಹಾಜರಾಗಿ ಕೋರ್ಟಿನವರು ಅವರ ವಿಷಯವಾಗಿ ಹುಕ್ಕುಂ ಮಾಡುವ ಮೇರಿಗೆ ಅವರು ನಡಕೊಳ್ಳತಕ್ಕದ್ದೆಂದು ಮತ್ತು ಐರ್ಜ ಲೇಣೇದಾರರಾದವರು ಹಾಜರಾಗಿ ಅವರ ಕೋರಿಕೆಯನ್ನು ಆಪೇಕ್ಷಿಸುವದಕ್ಕೆ ಸ್ವತಂತ್ರರಾಗಿರುತ್ತಾರೆಂದು ಈ ಮೂಲಕ ನೋಟೀಸ್ ಕೊಡಲ್ಪಟ್ಟು ಇರುತ್ತದೆ.

ತಾರೀಖು 22ನೇ ಡಿಸಂಬರ್ 1883ನೇ ಇಸವಿ, ಮೊಕ್ಕಾಂ ಚಿಕ್ಕ ಮಗಳೂರು.

ಬಿ. ತಿರುಮಲಾಚಾರ್,
ಸಬ್ ಜಡ್ಜ.

ನಂದೀದುರ್ಗ ಡಿವೀರ್ಜ.

ನಂದೀದುರ್ಗ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ್ 495.

ಮೃತಪಟ್ಟ ನಂಜಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮುನಿವೆಂಕಟಪ್ಪ, ಮುನಿಯಪ್ಪ, ಮೃತಪಟ್ಟ ಸದರೀ ನಂಜಪ್ಪನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಗಂಗಮ್ಮನಗುಡಿ ಪಾಳ್ಯ ಸ್ಥಳದ ಮುನಿವೆಂಕಟಪ್ಪ, ಮುನಿಯಪ್ಪ, ಇವರು ಡಿಟೋ ವಾಸಸ್ಥನಾಗಿ ಮೃತಪಟ್ಟ ನಂಜಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ಮೈನರ್ ಕಾಳಪ್ಪ, ಕೊನೇರಪ್ಪ, ಇವರಿಗೋಸ್ಕರ ಗಾರ್ಡಿಯನ್ನಾಗಿ ವಸೂಲ್ಮಾಡುವದಕ್ಕೆ ಸ್ವ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿವೆಂಕಟಪ್ಪ, ಮುನಿಯಪ್ಪ, ಇವರ ಅರ್ಜಿಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಸ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1883ನೇ ಇಸವಿ ಅರ್ಜೀ ನಂಬರ್ 496.

ಮೃತಪಟ್ಟ ದೇವಾಂಗದ ವುಗ್ರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕ ಆದೆಪ್ಪ, ಮೃತಪಟ್ಟ ಸದರೀ ವುಗ್ರಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ದೇವನಹಳ್ಳಿ ಸ್ಥಳದ ಚಿಕ್ಕ ಆದೆಪ್ಪನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ವುಗ್ರಪ್ಪನವರ ಜೆಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ,

ಸದರೀ ದರಖಾಸ್ತುದಾರರಾದ ಚಿಕ್ಕ ಆದೆಪ್ಪನವರ ಅರ್ಜೀಯನ್ನು 1884ನೇ ಇಸವಿ ಜನವರೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವುಗ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1883ನೇ ಇಸವಿ ಡಿಸಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವೀ ಅರ್ಜೀ ನಂಬರ್ 1.

ಮೃತಪಟ್ಟ ಅಕ್ಕಂಣಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಲಕ್ಷ್ಮೀನಾರಾಯಣಶಾಸ್ತ್ರಿ, ಮೃತಪಟ್ಟ ಸದರೀ ಅಕ್ಕಂಣಮ್ಮನಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರ ತಾಲ್ಲೂಕು ವಡುಗೂರು ಸ್ಥಳದ ಲಕ್ಷ್ಮೀನಾರಾಯಣಶಾಸ್ತ್ರಿ, ಡಿಟೋ ವಾಸಸ್ಥಳಾಗಿ ಮೃತಪಟ್ಟ ಅಕ್ಕಂಣಮ್ಮನ ಜೆಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮೀನಾರಾಯಣಶಾಸ್ತ್ರಿ ಅರ್ಜೀಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 13ರಲ್ಲು ಬೆಂಗಳೂರು ಮೊಕ್ತಾಂನಲ್ಲಿ ಕೇಳಿ ಸರ್ಟಿಕೇಟ್ ಪಡಿಯತಕ್ಕ ಬಾಬ್ತನ್ನು ವಿಚಾರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಕ್ಕಂಣಮ್ಮನ ಆಸ್ತಿಗೆ ಹಕ್ಕುದಾರರಾದ ವಿಶೇಷ್ಯರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜನವರೀ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆರ್. ಎ. ತಂಬುಚೆಟ್ಟಿ,
ಡಿಸ್ಟ್ರಿಕ್ಟು ಜಡ್ಜ.

ಮೈಸೂರು ಗೆಜೆಟ್, ಚಂದಾ ದರ ವಗ್ಗೈರೆ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ೀವೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ-	3 8	1 12
ಇಂಗ್ಲೀಷು ಮತ್ತು ಕನ್ನಡ ಸದಾ 12 ತಿಂಗಳಿಗೆ	7 0	3 8

ಭಕ್ಷಿ ಮಾಹಿ ಯಾ ಕ್ವಾರಟ್ಟರಿಗೆ ದಾವಾಷಾಯಿ ಪ್ರಕಾರ ದರಗಳು.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಯು ಅನುಸರಿಸಿ ಸರ್ಟಿಫಿ

ಕೇಟ್ ಬಗ್ಯೆ ನೋಟೀಸುಗಳು:— ರೂ. ಆ.

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) .. 2 8

ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ 1 4

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಫ್ಲಿಕೇಷನ್‌ಗಳ ಬಗ್ಯೆನೋಟೀಸ್‌ಗಳಿಗೆ:—

ಮೊದಲನೇ ದಫಾ 5 0

ಯರಡನೇ ವ ಆ ತರುವಾಯ ಪ್ರತಿ ದಫಾಕ್ಕೆ 2 8

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸುಗಳಿಗೆ:—

ಮೊದಲನೇ ಸಲಕ್ಕೆ .. ಪುಟ 1ಕ್ಕೆ .. 10 0

ಯರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ „ .. 5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಬ್ಲಿ 1ಕ್ಕೆ .. 0 8

ಯರಡನೇ ದಫಾ ಡಿಟೋ ಡಿಟೋ .. 0 6

ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ 0 4

ಬಮೋಜೇಬ್ ಹುಕ್ಕುಂ,
ಹೆಚ್. ಹಡಸ್ಸ್,
ಮೈ. ಗೆ. ಕಂಪ್ಟೆಲರ್.

Mysore Government Press, Bangalore.—1884.